# ಕುಂದಾಪುರ ಪುರಸಭೆ

ಈ ಮೂಲಕ ಪುರಸಭೆ , ಕುಂದಾಪುರ ತಿಳಿಯಪಡಿಸುವುದೇನೆಂದರೆ ಗಣೇಶ ಚತುರ್ಥಿಹಬ್ಬದ ದಿನಗಳಲ್ಲಿ ಗಣೇಶ ಮೂರ್ತಿಗಳನ್ನು ಕೆರೆ,ಬಾವಿ ಅಥವಾ ನದಿಗಳಲ್ಲಿ ವಿಸರ್ಜಿಸುವುದರಿಂದ ಆಗುವ ಜಲಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ಕೆಳಕಂಡ ಮಾರ್ಗೋಪಾಯಗಳನ್ನು ಅನುಸರಿಸಬೇಕಾಗಿ ಸಾರ್ವಜನಿಕರಲ್ಲಿ ಕೋರಲಾಗಿದೆ.

(1) ಬೇಯಿಸಿದ ಮಣ್ಣಿನಿಂದ ಮಾಡಿದ ಮೂರ್ತಿಗಳ ಬದಲು ಹಸಿ ಮಣ್ಣಿನಿಂದ ಮಾಡಿ ಒಣಗಿಸಿದ ಮೂರ್ತಿಗಳನ್ನು ಉಪಯೋಗಿಸುವುದು .

(2) ಅಪಾಯಕಾರಿ ಹಾಗೂ ನೀರಿನಲ್ಲಿ ಕರಗದ ಬಣ್ಣಗಳನ್ನು ಬಳಸಿ ಮಾಡಿದ ಮೂರ್ತಿಗಳ ಬದಲು ನಿರಪಾಯಕಾರಿ ಹಾಗೂ ನೀರನಲ್ಲಿ ಕರಗುವ ನೈಸರ್ಗಿಕ ಬಣ್ಣಗಳನ್ನು ಬಳಸಿ ಮಾಡಿದ ಮೂರ್ತಿಗಳನ್ನು ಉಪಯೋಗಿ ಸುವುದು , ಆದರೆ ಯಾವುದೇ ಬಣ್ಣ ಹಾಕದ ಹಸಿಯ ಮಣ್ಣಿನಿಂದ ಮಾಡಿದ ಮೂರ್ತಿಗಳನ್ನು ಉಪಯೋಗಿಸುವುದು .

(3) ಗಣೇಶ ಮೂರ್ತಿಗಳನ್ನು ನೀರಿನಲ್ಲಿ ವಿಸರ್ಜಿಸುವ ಮುನ್ನ ಪೂಜಾಸಾಮಾಗ್ರಿಗಳನ್ನು ಅಂದರೆ, ಹೂವುಗಳು, ಬಟ್ಟೆ ಮತ್ತಿತರ ಅಲಂಕಾರಿಕ ವಸ್ತುಗಳನ್ನು ಬೇರ್ಪಡಿಸಿ ಕೇವಲ ಮೂರ್ತಿಯೊಂದನ್ನು ಮಾತ್ರ ವಿಸರ್ಜಿಸಬೇಕು ಮತ್ತು ಬೇರ್ಪಡಿಸಿದ ಘನತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಪುರಸಭೆಯ ಘನತ್ಯಾಜ್ಯ ವಸ್ತು ಸಂಗ್ರಹಣ ವಾಹನಕ್ಕೆ ಕೊಡಬೇಕು.

(4) ಆದಷ್ಟು ಸಾರ್ವಜನಿಕರು ಹಸಿ ಮಣ್ಣಿನಿಂದ ಮಾಡಿದ ಬಣ್ಣ ಲೇಪನ ಮಾಡದ ಸಣ್ಣ ಗಾತ್ರದ ಮೂರ್ತಿಗಳನ್ನು ಉಪಯೋಗಿಸುವುದು.

ವಿ.ಸೂ: ಗಣೇಶೋತ್ಸವಗಳನ್ನು ನಡೆಸುವ ಸಂಘ ,ಸಂಸ್ಥೆ , ಮಂಡಳಿ ಮುಂತಾದವುಗಳು ಈ ಮೇಲೆ ತಿಳಿಸಿರುವ ಮಾರ್ಗೋಪಾಯಗಳನ್ನು ಪಾಲಿಸಿ ಮತ್ತು ಪ್ರತಿನಿತ್ಯ ಉತ್ಪಾದನೆಯಾಗುವ ಘನತ್ಯಾಜ್ಯವನ್ನು ಎಲ್ಲೆಂದರಲ್ಲೆ ಬಿಸಾಡದೆ ಪುರಸಭೆಯು ಘನತ್ಯಾಜ್ಯ ವಸ್ತುಗಳನ್ನು ಸಾಗಿಸುವ ವಾಹನಕ್ಕೆ ಶೇಖರಿಸಿಟ್ಟಿಕೊಂಡು ಕೊಡುವ ವ್ಯವಸ್ಥೆಯನ್ನು ಮಾಡಿಕೂಳ್ಳಬೇಕು.

| | |
|---|---|
| -/ಸಹಿ | -/ಸಹಿ |
| ಅಧ್ಯಕ್ಷರು, | ಮುಖ್ಯಾಧಿಕಾರಿ, |
| ಪುರಸಭೆ,ಕುಂದಾಪುರ | ಪುರಸಭೆ,ಕುಂದಾಪುರ |

PDF Created with deskPDF PDF Writer - Trial :: http://www.docudesk.com